Second Meeting (21)

# ದಿನಾಂಕ: 04–04–2005 ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ದ್ವಿತೀಯ ಸಭೆಯ ನಡವಳಿಗಳು

ಸಭೆಗೆ ಹಾಜರಾದವರ ಪಟ್ಟಿಯನ್ನು ಅನುಬಂಧ-Iರಲ್ಲಿ ನೀಡಿದೆ.

ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಸಭೆಗೆ ಹಾಜರಾದ ನೂತನ ಅಧ್ಯಕ್ಷರು ಮತ್ತು ಸದಸ್ಯರನ್ನು ಸ್ವಾಗತಿಸಿದರು.

ಮಾನ್ಯ **ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ,** ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು, ಜೈವಿಕವೈವಿಧ್ಯ ಅಧಿನಿಯಮದಡಿ ಮಂಡಳಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಸುದೀರ್ಘವಾಗಿ ವಿವರಿಸಿ ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಿದರು.

**ವಿಷಯ 1: ದಿನಾಂಕ:12-12-2003ರ ಪ್ರಥಮ ಸಭೆಯ ನಡವಳಿಗಳನ್ನು ಓದುವುದು ಮತ್ತು ದೃಢೀಕರಿಸುವುದು:**

ದಿನಾಂಕ:12-12-2003ರಂದು ಜರುಗಿದ ಮಂಡಳಿಯ ಪ್ರಥಮ ಸಭೆಯ ನಡವಳಿ ಗಳನ್ನು ಯಾವುದೇ ಬದಲಾವಣೆಗಳಿಲ್ಲದೆ ದಾಖಲಿಸಲಾಯಿತು.

**ವಿಷಯ 2: ಮೊದಲ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.**

**i.ಕುವೆಂಪು ಸ್ಮಾರಕ ಜೀವವೈವಿಧ್ಯ ಉದ್ಯಾನದಲ್ಲಿ ಪ್ರಸ್ತಾವಿಸಲಾದ ಚಟುವಟಿಕೆಗಳು:**

ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಕುವೆಂಪು ಸ್ಮಾರಕ ಜೈವಿಕವೈವಿಧ್ಯ ಉದ್ಯಾನದ ಪ್ರಗತಿ ಬಗ್ಗೆ ವಿವರ ನೀಡಿದರು. ಪ್ರಧಾನ ಕಾರ್ಯದರ್ಶಿ,ಅಪಜೀ ಇವರು ಕುವೆಂಪು ಸ್ಮಾರಕ ಬಯೋಸ್ಫಿಯರ್ (ಜೈವಿಕ ಮಂಡಲ) ಎಂದು ಪ್ರಸ್ತಾಪಿಸಲಾಗಿದ್ದನ್ನು ಈ ಪ್ರದೇಶದಲ್ಲಿ ಹೆಚ್ಚಿನ ಜನವಸತಿ ಇರುವುದರಿಂದ ಹಾಗೂ ಅರಣ್ಯ ಪ್ರದೇಶ ಹೆಚ್ಚು ವಿಭಜಿತಗೊಂಡಿರುವುದರಿಂದ ಜನರನ್ನು ಒಕ್ಕಲೆಬ್ಬಿಸುವರೆಂಬ ಅನಾವಶ್ಯಕ ಭೀತಿ ಉಂಟಾಗಿದ್ದುದರಿಂದ ಸದ್ಯಕ್ಕೆ ಕೈಬಿಡಬೇಕಾಯಿತೆಂದು ತಿಳಿಸಿ ಕೇವಲ ಕುವೆಂಪು ಜೈವಿಕವನ ಅಭಿವೃದ್ಧಿಪಡಿಸಲು ಮತ್ತು ಸರ್ಕಾರದ

(೨)

ನೀತಿಯಂತೆ ಅದಕ್ಕೆ ತಾಗಿರುವ ಅರಣ್ಯ ಪ್ರದೇಶವನ್ನು ಸೇರಿಸುವ ಕಾರ್ಯ ಮತ್ತು ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಲಾ ಒಂದೊಂದು ಸಂದೇಶವನ ಸ್ಥಾಪಿಸುವ ಬದಲು ಕುಪ್ಪಳ್ಳಿ ಹತ್ತಿರ ರೂ.13.50 ಲಕ್ಷ ವೆಚ್ಚದಲ್ಲಿ ಕುವೆಂಪು ಸಂದೇಶವನ ನಿರ್ಮಿಸಲು ಮಂಜೂರಾತಿ ನೀಡಿದ ಬಗ್ಗೆ ಸಭೆಗೆ ತಿಳಿಸಿದರು. ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ರೂ.1.00 ಕೋಟಿ ಅನುದಾನದಲ್ಲಿ ಬಾಕಿ ಉಳಿದಿರುವ 48.00 ಲಕ್ಷದಲ್ಲಿ ಕುವೆಂಪು ಸ್ಮಾರಕ ಜೈವಿಕಧಾಮದಲ್ಲಿಯ ಜೈವಿಕ ಸಂಪನ್ಮೂಲಗಳ ನಿರ್ಧಾರಣೆ, ತಪಶೀಲು ಹಾಗೂ ದಾಖಲೆಗಳ ಪಟ್ಟಿ ತಯಾರಿಕೆ ಮತ್ತು ಚಿಪ್ಪಲುಗುಡ್ಡ ಗ್ರಾಮದ ಹತ್ತಿರ ತುಂಗಾನದಿಯಲ್ಲಿ ಪ್ರಸ್ತಾವಿತ ಕುವೆಂಪು ಮತ್ಸ್ಯಧಾಮಕ್ಕೆ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವುದು ಹಾಗೂ ಜೈವಿಕಧಾಮದೊಳಗೆ ಬರುವ ಗ್ರಾಮ ಪಂಚಾಯತುಗಳಲ್ಲಿ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಸ್ಥಾಪಿಸಿ ಜನತಾ ಜೀವವೈವಿಧ್ಯ ದಾಖಲೆಗಳನ್ನು ತಯಾರಿಸುವ ಪ್ರಸ್ತಾವನೆಯನ್ನು ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಮಂಡಿಸಿದರು. ಈ ಬಗ್ಗೆ ಮುಂದಿನ ಸಭೆಯಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಬಹುದೆಂದು ಮುಂದೂಡಲಾಯಿತು.

**ii. ಕರ್ನಾಟಕ ಪೂರ್ವಮೈದಾನ ಪ್ರದೇಶದ ಜೀವವೈವಿಧ್ಯ ಸಂರಕ್ಷಣೆಯ ಯೋಜನೆ:**

ಪ್ರಧಾನ ಕಾರ್ಯದರ್ಶಿ, ಅಪಜೀ ಇವರು JBICಯ 2ನೇ ಹಂತದ ಯೋಜನೆಯಲ್ಲಿ ಈ ಕಾರ್ಯಕ್ಕಾಗಿ ಮಂಡಳಿಗೆ ರೂ.2.00 ಕೋಟಿ ಅನುದಾನವನ್ನು ಪ್ರಸ್ತಾವಿಸಿರುವ ಬಗ್ಗೆ ಸಭೆಗೆ ತಿಳಿಸುತ್ತಾ ಈ ಮೊತ್ತವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಸೂಕ್ತ ಯೋಜನೆಯನ್ನು ತಯಾರಿಸಿ ಕಳುಹಿಸುವಂತೆ ಸೂಚಿಸಿದರು.

**iii. ಕರಾವಳಿಯ ಜೀವವೈವಿಧ್ಯ ಸಂರಕ್ಷಣೆಯ ಯೋಜನೆ:**

ಸರ್ಕಾರ ಹಾಗೂ KUIDFC ಇವರ ಸೂಚನೆ ಮೇರೆಗೆ ರೂ. 109.70 ಲಕ್ಷದ ಪರಿಷ್ಕೃತ ಯೋಜನೆಯನ್ನು ಮರುಸಲ್ಲಿಸಿರುವ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದು ಮಂಜೂರಾತಿ ನಿರೀಕ್ಷಿಸಲಾಗಿದೆಯೆಂದು ತಿಳಿಸಿದರು.

**iv. ಮತ್ಸ್ಯಧಾಮಗಳ ಘೋಷಿಸುವಿಕೆ:**

ಮಂಡಳಿ ಕೈಗೊಂಡ ಕ್ರಮವನ್ನು ಸಭೆಯು ಪರಿಶೀಲಿಸಿತು.

**v. ಜೀವವೈವಿಧ್ಯ ಮಂಡಳಿಯ ನೋಂದಾವಣೆ:**

ಮಂಡಳಿ ಕೈಗೊಂಡ ಕ್ರಮವನ್ನು ಸಭೆಯು ಪರಿಶೀಲಿಸಿತು.

19

**vi.ಉಪ ಸಮಿತಿಗಳ ರಚನೆ:**

ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು

**vii.ಕರ್ನಾಟಕದಲ್ಲಿ ಜೀವವೈವಿಧ್ಯ ಮಾಹಿತಿ ತಂತ್ರಜಾಲ ಸಿದ್ಧಪಡಿಸುವಿಕೆ:**

ಈ ಬಗ್ಗೆ ಪ್ರೊ. ಮಾಧವ ಗಾಡ್ಗಿಲ್ ರವರು ಜೀವವೈವಿಧ್ಯದ ಮಾಹಿತಿ ತಂತ್ರಜಾಲವನ್ನು ರಾಷ್ಟ್ರೀಯ, ರಾಜ್ಯ, ಜಿಲ್ಲಾ, ತಾಲ್ಲೂಕ ಮತ್ತು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ರೂಪಿಸುವ ಅಗತ್ಯತೆ ಮತ್ತು ಈ ಎಲ್ಲಾ ಮಾಹಿತಿಯನ್ನು ಸಂಪರ್ಕಿಸುವ ವಿದ್ಯುನ್ಮಾನ ತಂತ್ರಜಾಲ ಸ್ಥಾಪಿಸುವ ಬಗ್ಗೆ ತಿಳಿಸಿದರು. ಮಂಡಳಿಯು ರಾಜ್ಯ ಮಟ್ಟದ ಮಾಹಿತಿಯನ್ನು ಹಾಗೂ ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಂಸ್ಥೆಗಳು ತಯಾರಿಸಲಿರುವ ಜನತಾ ಜೀವವೈವಿಧ್ಯ ದಾಖಲಾತಿ ವಿವರಗಳನ್ನು ಕ್ರೋಡೀಕರಿಸುವ ವ್ಯವಸ್ಥೆ ಹೊಂದಿರಬೇಕೆಂದು ಅಪೇಕ್ಷಿಸಿದರು. ಈ ಬಗ್ಗೆ ಮಂಡಳಿಯು ಈಗಾಗಲೇ ಜೀವವೈವಿಧ್ಯದ ಮಾಹಿತಿಯನ್ನು ಹೊಂದಿರುವ ಸಂಸ್ಥೆಗಳನ್ನು ಹೆಸರಿಸಿ ಪಡೆಯಬೇಕಾದ ಮಾಹಿತಿದಾರರ ವಿವರಗಳನ್ನು ಅನುಬಂಧ-5 ರಲ್ಲಿ ನೀಡಿದಂತೆ ಮಾಹಿತಿ ಸಂಗ್ರಹಿಸುವ ಮತ್ತು ಇದರಲ್ಲಿ ಯಾವ ಮಾಹಿತಿಯನ್ನು ಜನರಿಗೆ ತಿಳಿಯಪಡಿಸಬಹುದು ಎಂಬುದರ ಬಗ್ಗೆ ಒಂದು ಉಪ ಸಮಿತಿ ರಚಿಸಲು ಪ್ರಸ್ತಾವಿಸಿದರು. ಈ ಬಗ್ಗೆ ಸಭೆಯು ಜೀವವೈವಿಧ್ಯದ ಮಾಹಿತಿ ಕೇಂದ್ರ ಹಾಗೂ ವಿದ್ಯುನ್ಮಾನ ಮಾಹಿತಿ ತಂತ್ರಜಾಲವನ್ನು ರೂಪಿಸಲು ಮಂಡಳಿಯು ಪ್ರೊ.ಮಾಧವ ಗಾಡ್ಗಿಲ್ ರವರ ನೆರವನ್ನು ಪಡೆದು ಯೋಜನೆಯೊಂದನ್ನು ತಯಾರಿಸಿ ಮಂಡಳಿಯ ಮುಂದಿನ ಸಭೆಯಲ್ಲಿ ಪರಿಶೀಲನೆಗೆ ಮಂಡಿಸುವಂತೆ ತೀರ್ಮಾನಿಸಲಾಯಿತು.

**viii.ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ:**

ಮಂಡಳಿ ಕೈಗೊಂಡ ಕ್ರಮವನ್ನು ಸಭೆಯು ಪರಿಶೀಲಿಸಿತು.

**ix. ಔಷಧಿ ಸಸ್ಯಗಳ ಪಟ್ಟಿ ತಯಾರಿಕೆ:**

ಮಂಡಳಿ ಕೈಗೊಂಡ ಕ್ರಮವನ್ನು ಸಭೆಯು ಪರಿಶೀಲಿಸಿತು.

**x. ಬೌದ್ಧಿಕ ಆಸ್ತಿ ಹಕ್ಕು**

ಮಂಡಳಿ ಕೈಗೊಂಡ ಕ್ರಮವನ್ನು ಸಭೆಯು ಪರಿಶೀಲಿಸಿತು.

**ವಿಷಯ 3: ಮಂಡಳಿಯು ಕೈಗೊಂಡಿರುವ ಕಾರ್ಯಚಟುವಟಿಕೆಗಳ ಪರಿಶೀಲನೆ.**

ಮಂಡಳಿ ಕೈಗೊಂಡ ಕಾರ್ಯಚಟುವಟಿಕೆಗಳನ್ನು ಸಭೆಯು ಪರಿಶೀಲಿಸಿತು.

**ವಿಷಯ 4: ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು, 2005ರ ಕರಡನ್ನು ಅಂಗೀಕರಿಸುವ ಬಗ್ಗೆ:**

ಈ ನಿಯಮಗಳನ್ನು ವಿವರವಾಗಿ ಪರಿಶೀಲಿಸಲು ಸಮಯಾವಕಾಶ ಬೇಕಾದ್ದರಿಂದ ಈ ವಿಷಯವನ್ನು ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ಮತ್ತೊಮ್ಮೆ ಮಂಡಿಸಲು ಮುಂದೂಡಲಾಯಿತು.

**ವಿಷಯ 5: ಮಂಡಳಿಯು ಕೈಗೊಂಡ ಆಡಳಿತಾತ್ಮಕ ಕ್ರಮಗಳನ್ನು ಪರಿಶೀಲಿಸಿ ಅನುಮೋದಿಸುವುದು**

ಮೂಲಭೂತ ಸೌಕರ್ಯಗಳಿಗಾಗಿ ಮಂಡಳಿಯು ಕೈಗೊಂಡ ರೂ.4,56,303 ಗಳ ವೆಚ್ಚಕ್ಕೆ ಸಭೆಯು ಅನುಮೋದನೆ ನೀಡಿತು.

**ವಿಷಯ 6: 2005-2006 ಸಾಲಿಗೆ ಮಂಡಳಿಯ ಆಯವ್ಯಯ ಪತ್ರ:**

ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**ವಿಷಯ 7: ಚೆನ್ನೈನ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಿಂದ ನೀಡಲಾದ ಅನುದಾನ:**

ಚೆನ್ನೈನ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಮಂಡಳಿಗೆ ಮೂಲಭೂತ ಸೌಕರ್ಯಗಳಿಗಾಗಿ ಬಿಡುಗಡೆಗೊಳಿಸಿರುವ ರೂ.10.00 ಲಕ್ಷದಲ್ಲಿ ಈ ಕೆಳಗಿನವುಗಳನ್ನು ಖರೀದಿಸಲು ಸಭೆಯು ಮಂಜೂರಾತಿ ನೀಡಿತು.

| | | |
|---|---|---|
| i | ವಾಹನ (ಟಾಟಾ ಸುಮೋ) | 5,25,000 |
| ii | ಗಣಕಯಂತ್ರಗಳು | 1,00,000 |
| iii | ಲ್ಯಾಪ್‌ಟಾಪ್ | 80,000 |
| iv | LCD ಪ್ರೊಜೆಕ್ಟರ್ | 80,000 |
| v | Overhead ಪ್ರೊಜೆಕ್ಟರ್ | 12,000 |
| vi | ಸ್ಲೈಡ್ ಪ್ರೊಜೆಕ್ಟರ್ | 10,000 |
| vii | ಪ್ರೊಜೆಕ್ಟರ್ ಸ್ಕ್ರೀನ್ | 3,000 |
| viii | ಡಿಜಿಟಲ್ ಕ್ಯಾಮೆರಾ | 30,000 |
| ix | ಸಭಾಂಗಣ ಕುರ್ಚಿ,ಮೇಜು | 60,000 |
| x | ವೆಬ್‌ಸೈಟ್ & ಮಾಹಿತಿ ತಂತ್ರಜಾಲ | 1,00,000 |
| | **ಒಟ್ಟು** | **10,00,000** |

**ವಿಷಯ 8: ಮಂಡಳಿಯ ಲೆಕ್ಕ ಪತ್ರಗಳ ತಪಾಸಣೆ:**

ಸಭೆಯು ಮಂಡಳಿಯ ಕ್ರಮವನ್ನು ಪರಿಶೀಲಿಸಿತು.

**ವಿಷಯ 9: ಸಹಪ್ರಾಧ್ಯಾಪಕ/ರೀಡರ್ ಪ್ರಾಣಿಶಾಸ್ತ್ರ ಹುದ್ದೆಯನ್ನು ಭರ್ತಿಗೊಳಿಸುವುದು:**

ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು.

**ವಿಷಯ 10: ಮಂಡಳಿಯ ಸ್ವತಂತ್ರ ವೆಬ್ ಸೈಟ್ ಆರಂಭಿಸುವ ಬಗ್ಗೆ:**

ವಿಷಯ 2 ರ ಕ್ರಮಾಂಕ (vii) ರಲ್ಲಿ ಚರ್ಚಿಸಿದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು. ಅದರಂತೆ ಸೂಕ್ತ ಯೋಜನೆಯನ್ನು ಸಿದ್ಧಪಡಿಸಿ ಮಂಡಳಿಯ ಮುಂದಿನ ಸಭೆಯಲ್ಲಿ ಪರಿಶೀಲನೆಗೆ ಮಂಡಿಸುವಂತೆ ಸೂಚಿಸಲಾಯಿತು.

**ವಿಷಯ 11: ಮಂಡಳಿಯು ಅಧಿಕಾರಿಗಳಿಗೆ ಸಂಚಾರಿ ದೂರವಾಣಿ ಒದಗಿಸುವ ಬಗ್ಗೆ ಅಂಗೀಕಾರ:**

ಈ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸೂಚಿಸಲಾಯಿತು.

**ವಿಷಯ 12: ಮಂಡಳಿಗೆ ಸೂಕ್ತ ಲಾಂಛನ ಆಯ್ಕೆ ಮಾಡುವ ಬಗ್ಗೆ:**

ಸಭೆಯು ಮಂಡಳಿಗೆ ಈ ಕೆಳಗಿನ ಲಾಂಛನವನ್ನು ಆಯ್ಕೆ ಮಾಡಿತು.

**ವಿಷಯ 13: ಔಷಧಿ ಸಸ್ಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೆಲವು ನಿರ್ಬಂಧಕ ಕ್ರಮಗಳನ್ನು ಜಾರಿಗೊಳಿಸುವುದು:**

ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯ ಕಲಾಪಗಳು ಮುಕ್ತಾಯವಾದವು.

**(ಗುರುಪಾದಪ್ಪ ನಾಗಮಾರಪಳ್ಳಿ)**
**ಅಧ್ಯಕ್ಷರು**
**ಕರ್ನಾಟಕ ಜೀವವೈವಿಧ್ಯ ಮಂಡಳಿ ಹಾಗೂ**
**ಮಾನ್ಯ ಸಚಿವರು**
**ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ**